## ನಿಮಗೂ ಬಡೀಲಾ?

ಉತ್ತರ ಕರ್ನಾಟಕದ ಗೆಳೆಯ ಮಂಗಳೂರಿಗೆ ವರ್ಗಾವಣೆಯಾಗಿದ್ದ. ಅವನನ್ನು ಕಾಣಲು ಹೋಗಿದ್ದೆ. ಗೆಳೆಯ ಸ್ನಾನಕ್ಕೆ ಹೋಗಿದ್ದ. ಅವನ ಹೆಂಡತಿಯೇ ನನ್ನನ್ನು ಸ್ವಾಗತಿಸಿದರು. 'ಬೆಳಗ್ಗೆ ಏನ್ ನಾಷ್ಟಾ ಮಾಡಿದ್ರಿ?' ಕೇಳಿದರು. ಹೇಳಿದೆ. 'ನೀವೇನು ಮಾಡಿದ್ದೀರಿ?' ಕೇಳಿದೆ. 'ರೊಟ್ಟಿ, ಹುಚ್ಚೆಳ್ಳು ಚಟ್ನಿ' ಎಂದರು. ಆಮೇಲೆ, 'ಏನ್ರೀ, ನಿಮ್ಗೂ ಎರಡು ಬಡೀಲಾ?' ಕೇಳಿದರು. ಮಂಗಳೂರಿನ ಭಾಷೆಯಲ್ಲಿ 'ಬಡೀಲಾ' ಎಂದರೆ 'ಹೊಡೆಯುವುದು' ಎಂದೇ ಅರ್ಥ. ಆ ವೇಳೆಗೆ ಸ್ನಾನ ಮಾಡಿ ಬಂದ ಗೆಳೆಯ, 'ರೊಟ್ಟಿ ಮಾಡ್ಕೊಡ್ಲಾ ಅಂತ ಕೇಳೇ. ಬಡೀಲಾ ಅಂತ ಕೇಳಿದ್ರೆ ಅವ್ರು ಗಾಬ್ರಿಯಾಗಿ ಎದ್ದೋಡ್ತಾರೆ. ಇಲ್ಲಿ ರೊಟ್ಟಿ ಬಡಿಯೋದು ಅನ್ನೋದಿಲ್ಲ, ತಟ್ಟೋದು ಅನ್ತಾರೆ' ಎಂದು ಗೊಂದಲ ಬಗೆಹರಿಸಿದ.

**ಪ. ರಾಮಕೃಷ್ಣ ಶಾಸ್ತ್ರಿ**





## 'ಪುಣ್ಯ ಸ್ನಾನ'

ಸಂಕ್ರಮಣದ ದಿನ ನಮ್ಮೂರ ಹೊಳೆಗೆ ಸಮೀಪದ ನಗರವಾಸಿಗಳು 'ಪುಣ್ಯಸ್ನಾನ'ಕ್ಕೆಂದು ಬಂದಿದ್ದರು. ಹೊಳೆಯ ದಂಡೆಯಲ್ಲಿ ಏಡಿ ಹಿಡಿಯುತ್ತಿದ್ದ ಮಕ್ಕಳು ನನ್ನನ್ನು ಕಂಡೊಡನೆ ಓಡಿಬಂದು, ತಮ್ಮ ಬೇಟೆಯ ಸಾಹಸವನ್ನು ತೋರಿಸುತ್ತಿದ್ದರು. ಗುಂಪಿನಲ್ಲಿದ್ದ ಕಲ್ಲೇಶ ಎಂಬ ವಿದ್ಯಾರ್ಥಿ, 'ಸಾ, ಇವ್ರು ಯದಕಾ ಈ ಗುಂಡ್ಯಾಗ ಮುಣಿಗೆದ್ದಾಳ್ತಾರ್ ಸಾ?' ಎಂದ. 'ಇಂದು ಸಂಕ್ರಮಣ, ಅದಕ್ಕೆ ಅವರೆಲ್ಲಾ ಪುಣ್ಯಸ್ನಾನ ಮಾಡ್ತಿದಾರೆ' ಎಂದೆ. ಅದಕ್ಕವನು, 'ಓ, ಹಂಗಂದ್ರಾ ಇವರೆಲ್ಲ ಪಾಪಾ ಮಾಡಿ ಬಂದ್ರೇನ್ ಸಾ?' ಎಂದ ಮುಗ್ಧವಾಗಿ. ಅವನ ಪ್ರಶ್ನೆಗೆ ನನ್ನ ಬಳಿ ಉತ್ತರವಿರಲಿಲ್ಲ!

**ಮಹೇಶ್ವರ ಹುರುಕಡ್ಲಿ**